**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಚಾಸಾಃ 15 ಫ್ರಾಸಾಃ 9**

**ಸಿ.ಸಿ ಸಂಖ್ಯೆ: 3/2025**

| | |
|---|---|
| ಹೆಸರು | :ತಾರಾನಾಥ್ ಎನ್ |
| ತಂದೆಯ ಹೆಸರು | :ಸೀತಾರಾಮ ಎನ್ |
| ಪ್ರಾಯ | :59 ವರ್ಷ |
| ಉದ್ಯೋಗ | :ಎ.ಎಸ್.ಐ, ಸುಳ್ಯ ಪೋ.ಠಾಣೆ |
| ವಾಸ | : ಸುಳ್ಯ |

**ದಿನಾಂಕ 04.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿ. 3.6.2021 ರಿಂದ ಈ ವರೆಗೆ ನಾನು ಸುಳ್ಯ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 5.3.2024 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 11 ಗಂಟೆಯ ಸಮಯದಲ್ಲಿ ಫ್ರಾಸಾ-1 ರವರು ಠಾಣೆಗೆ ಹಾಜರಾಗಿ ಮಹಜರನ್ನು, ಟಿಪ್ಪರ್ ಲಾರಿ, ಮರಳು ಹಾಗೂ ವರದಿಯನ್ನು ನೀಡಿದರು. ನಾನು ಆ ವರದಿಯನ್ನು ಸ್ವೀಕರಿಸಿ ಪ್ರ.ವ.ವರದಿಯನುನ ದಾಖಲಿಸಿದ್ದೇನೆ. ಫ್ರಾಸಾ-1 ರವರು ನೀಡಿದ ವರದಿಯನ್ನು ನಾನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಾನು ದಾಖಲಿಸಿದ ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-23 ಎಂದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–23(ಎ) ಎಂದು ಗುರುತಿಸಲಾಯಿತು. ಫ್ರಾಸಾ–1 ರವರು ಹಾಜರು ಪಡಿಸಿದ ಮಹಜರನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

ಮರಳು ಸಾಗಾಣಿಕೆಗೆ ಬಳಸಿದ ಕೆಎ–21–ಸಿ–4509 ನ್ನು ಹಾಗೂ ಅದರಲ್ಲಿದ್ದ 3 ಮೆಟ್ರಿಕ್ ಟನ್ ಮರಳನ್ನು ಮಾಲು ಪಟ್ಟಿ ಸಂ. 39/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ತದನಂತರ ಫ್ರಾಸಾ–2, ಫ್ರಾಸಾ–6, ಚಾಸಾ–4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಕೆಎ–21–ಸಿ–4509ರ ಟಿಪ್ಪರ್ ಲಾರಿಯಲ್ಲಿ ಮರಳು ಸಾಗಾಣಿಕೆ ಮಾಡಲು ಪರವಾನಿಗೆ ಇದೆಯೇ ಎನ್ನುವ ಬಗ್ಗೆ ವರದಿ ನೀಡುವಂತೆ ದಿ. 7.3.2024 ರಂದು ಮಂಗಳೂರಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದ್ದೇನೆ.

ತನ್ನ ತನಿಖಾಕಾಲದಲ್ಲಿ ಆರೋಪಿ ತಲೆಮರೆಸಿಕೊಂಡಿದ್ದ. ದಿ. 9.4.2024 ರಂದು ಆರೋಪಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡದು ಠಾಣೆಗೆ ಹಾಜರಾದ ಮೇರೆಗೆ ನಾನು ದಸ್ತಗಿರಿ ಕ್ರಮವನ್ನು ಕೈಗೊಂಡು ಆತನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿದ್ದೇನೆ. ಆ ಸಮಯದಲ್ಲಿ ನಾನು ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ತನ್ನನ್ನು ಕರೆದುಕೊಂಡು ಹೋದರೆ ಮರಳು ಕಳ್ಳತನ ಮಾಡಿದ ಸ್ಥಳವನ್ನು, ಅದನ್ನು ಲಾರಿಗೆ ಲೋಡ್ ಮಾಡಿದ ಸ್ಥಳವನ್ನು ತೋರಿಸಿಕೊಡುತ್ತೇನೆ ಎಂದು ಆತ ತನ್ನ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನಿಪಿ–24 ಎಂದು ಗುರುತಿಸಲಾಯಿತು. ಅದೇ ದಿನ ಫ್ರಾಸಾ–1, 2 ಹಾಗೂ 6 ರವರು ಆರೋಪಿಯನ್ನು ನೋಡಿ ಗುರುತಿಸಿ ತಮ್ಮ ಮರುಹೇಳಿಕೆ ನೀಡಿದ್ದಾರೆ.

ತದನಂತರ ನಾನು ಪ್ರಾಸಾ-3 ಹಾಗೂ ಚಾಸಾ-7 ರವರಿಗೆ ನೋಟೀಸ್ ನೀಡಿ ಅವರನ್ನು ಠಾಣೆಗೆ ಬರಮಾಡಿಕೊಂಡು ಮರಳು ಕಳ್ಳತನ ಮಾಡಿದ ಜಾಗದಲ್ಲಿ ಮಹಜರ್ ಜರುಗಿಸಲು ಸಹಕರಿಸಬೇಕೆಂದು ಕೇಳಿಕೊಂಡೆ. ನಾನು ಅವರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ತದನಂತರ ಆರೋಪಿಯ ಸೂಚನೆಯ ಮೇರೆಗೆ ನಾನು ಪಂಚಸಾಕ್ಷಿದಾರರನ್ನು, ಆರೋಪಿಯನ್ನು ಠಾಣಾ ಸಿಬ್ಬಂದಿಯಾದ ಪ್ರಾಸಾ-8 ಹಾಗೂ ಪ್ರಕಾಶ್ ರವರನ್ನು ಕರೆದುಕೊಂಡು ಅರಂತೋಡು ಗ್ರಾಮ ನೂಜಿಕಲ್ಲು ಎನ್ನುವಲ್ಲಿರುವ ಪಯಸ್ವಿನಿ ನದಿಯ ದಡದಲ್ಲಿ ಸಂಜೆ 5 ಗಂಟೆಗೆ ಹೋದೆ. ಆರೋಪಿ ಆ ಸ್ಥಳವನ್ನು ನನಗೆ ತೋರಿಸಿಕೊಟ್ಟ. ಆ ಸ್ಥಳವನ್ನು ನಾನು ಪರಿಶೀಲನೆ ಮಾಡಿ ಸಂಜೆ 5 ರಿಂದ 6 ಗಂಟೆಯ ಸಮಯದಲ್ಲಿ ಮಹಜರ್ ಜರುಗಿಸಿದ್ದೇನೆ. ಅದೇ ಸಮಯದಲ್ಲಿ ಕರಡು ನಕ್ಷೆಯನ್ನು ತಯಾರಿಸಿದ್ದೇನೆ. ನಾನು ಸ್ಥಳದಲ್ಲಿ ಜರುಗಿಸಿದ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ನಾನು ಸ್ಥಳದಲ್ಲಿ ತಯಾರಿಸಿದ ಕರಡು ನಕ್ಷೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಾನು ಆ ಸ್ಥಳದ ಪೋಟೋ ತೆಗೆಸಿದ್ದೇನೆ. ಸದರಿ ಪೋಟೋಗಳನ್ನು ನಾನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-12 ಮತ್ತು 13 ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಆದೇಶದಂತೆ ದಿ. 21.4.2024 ರಂದು ಕೆಎ.21.ಸಿ.4509 ರ ಟಿಪ್ಪರ್ ಲಾರಿಯನ್ನು ಅದರ ಮಾಲೀಕರಾದ ಆರೋಪಿಯ ಮಧ್ಯಂತರ ಸ್ವಾದೀನಕ್ಕೆ ನೀಡಿದ್ದೇನೆ. ಆ ಸಮಯದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮಹಜರ್

ಜರುಗಿಸಿದ್ದೇನೆ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ–25 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–25(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು ಪೋಟೋ ತೆಗೆಸಿದ್ದೇನೆ. ಆ ಪೋಟೋಗಳನ್ನು ನಾನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–21 ಹಾಗೂ 22 ಎಂದು ಗುರುತಿಸಲಾಗಿದೆ.

ಅರಂತೋಡು ಗ್ರಾಮದ ನೂಜಿಕಲ್ಲು ಎನ್ನುವ ಸ್ಥಳದಲ್ಲಿ ಪಯಸ್ವಿನಿ ನದಿ ದಂಡೆಯು ಯಾರಿಗೆ ಸೇರಿದೆ ಎನ್ನುವ ಬಗ್ಗೆ ವರದಿ ನೀಡುವಂತೆ ತಹಶೀಲ್ದಾರ್ ರಿಗೆ ಮನವಿ ಪತ್ರ ಸಲ್ಲಿಸಿದ್ದೇನೆ. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಮರಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಲು ಅನುಮತಿ ನೀಡಬೇಕೆಂದು ದಿ. 26.10.2024 ರಂದು ಮಾನ್ಯ ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿದ್ದು, ನ್ಯಾಯಾಲಯ ಅನುಮತಿ ನೀಡಿದೆ. ದಿ. 28.10.2024 ರಂದು ಮರಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಿ ಅಲ್ಲಿಂದ ದಿ. 29.10.2024 ರಂದು ಸ್ವೀಕೃತಿ ಪಡೆದಿದ್ದೇನೆ. ಸದರಿ ಸ್ವೀಕೃತಿ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ–26 ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಕೆಎ–21–ಸಿ–4509ರ ಟಿಪ್ಪರ್ ಲಾರಿಯಲ್ಲಿ ಮರಳು ಸಾಗಾಣಿಕೆ ಮಾಡಲು ಪರವಾನಿಗೆ ಇದೆಯೇ ಎನ್ನುವ ಬಗ್ಗೆ ವರದಿ ನೀಡುವಂತೆ ದಿ. 7.3.2024 ರಂದು ನಾನು ಮಂಗಳೂರಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದ್ದೆ. ಅದರಂತೆ ಆ ವಾಹನದಲ್ಲಿ ಮರಳು ಸಾಗಾಣಿಕೆ ಮಾಡಲು ಪರವಾನಿಗೆ ನೀಡಿಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕರು 12.3.2024 ರಂದು ವರದಿ ನೀಡಿದ್ದಾರೆ. ಆ ವರದಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–18 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–18(ಬಿ) ಎಂದು ಗುರುತಿಸಲಾಯಿತು.

ದಿ. 15.10.2024 ರಂದು ಅರಂತೋಡು ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯ ಜೊತೆ ಮರಳು ತೆಗೆದ ಸ್ಥಳಕ್ಕೆ ಭೇಟಿ ನೀಡಿ ಜಿ.ಪಿ.ಎಸ್ ಪೋಟೋ ತೆಗೆಸಿದ್ದೇನೆ. ಆ ಪೋಟೋಗಳನ್ನು ನಾನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–16 ಹಾಗೂ 17 ಎಂದು ಗುರುತಿಸಲಾಗಿದೆ. ಆ ಪೋಟೋಗಳನ್ನು ತೆಗೆದ ಬಗ್ಗೆ ಫ್ರಾಸಾ–8 ರವರು ಭಾ.ಸಾ.ಅ.ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರ ನೀಡಿದ್ದಾರೆ. ಆ ದಾಖಲೆಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–19 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–19(ಬಿ) ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಟಿಪ್ಪರ್ ಲಾರಿ ಹಾಗೂ ಮರಳನ್ನು ನೋಡಿ ಗುರುತಿಸುತ್ತೇನೆ. ಅದು ನಿಪಿ–5 ರಿಂದ 8 ರ ಪೋಟೋಗಳಲ್ಲಿ ಕಂಡು ಬರುತ್ತದೆ. ನಾನು ದಸ್ತಗಿರಿ ಕ್ರಮ ಕೈಗೊಂಡ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಆತ ನ್ಯಾಯಾಲಯದಲ್ಲಿರುವ ಆರೋಪಿಯಾಗಿದ್ದಾನೆ. ನಾನು ನಂತರ ಈ ಪ್ರಕರಣದ ತನಿಖೆಯನ್ನು ಚಾಸಾ–16 ರವರಿಗೆ ವಹಿಸಿಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎನ್ ವಕೀಲರಿಂದಃ**

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮರಳನ್ನು ನಿಮ್ಮ ವಶಕ್ಕೆ ಪಡೆದುಕೊಳ್ಳಿ ಎಂದು ನಮ್ಮ ಠಾಣೆಯಿಂದ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಮನವಿ ಪತ್ರ ನೀಡಿದ್ದು ಅದನ್ನು ಫ್ರಾಸಾ–8 ರವರು ಬೆರಳಚ್ಚು ಮಾಡಿದ್ದು, ಮಹಿಳಾ ಮುಖ್ಯ ಪೇದೆ ಹೇಮಾವತಿಯವರು ಸಹಿ ಮಾಡಿದ್ದಾರೆ. ಈ ಪ್ರಕರಣದಲ್ಲಿ ನನ್ನ ತನಿಖಾ ಕಾಲದಲ್ಲಿ ಎಲ್ಲಾ ಪೋಟೋಗಳನ್ನು ಫ್ರಾಸಾ–8 ರವರು ತೆಗೆದಿದ್ದಾರೆ. ಪಯಸ್ವಿನಿ ನದಿ ದಡಕ್ಕೆ ನಾವು ಹೋದಾಗ ಅಲ್ಲಿ ಮರಳು ತೆಗೆದಿರುವ ಕುರುಹುಗಳು ಕಂಡು ಬಂದವು. ಆ ಕುರುಹುಗಳನ್ನು ನಾನು ಸ್ಥಳದಲ್ಲಿ ತಯಾರಿಸಿದ ನಕ್ಷೆಯಲ್ಲಿ ತೋರಿಸಿಲ್ಲ.

ಆರೋಪಿ ಮರಳು ಕಳ್ಳತನ ಮಾಡಿ ಸಾಗಾಣಿಕೆ ಮಾಡಿಲ್ಲ, ಆತ ಸ್ವಇಚ್ಛಾ ಹೇಳಿಕೆಯನುನ ಕೊಟ್ಟಿಲ್ಲ, ನಾನು ಆತನನ್ನು ಕರೆದುಕೊಂಡು ಪಯಸ್ವಿನಿ ನದಿ ದಡಕ್ಕೆ ಹೋಗಿಲ್ಲ, ಅಲ್ಲಿ ಮಹಜರನ್ನು, ಕರಡು ನಕಾಶೆಯನ್ನು ತಯಾರಿಸಿಲ್ಲ, ಆ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ–1 ರವರು ನಮ್ಮ ಹಿರಿಯ ಅಧಿಕಾರಿ ಎಂದರೆ ಸರಿ. ಅವರು ಹೇಳಿದಂತೆ ನಾನು ದಾಖಲೆಗಳನ್ನು ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನ್ನನ ಸಮಕ್ಷಮ ಹೇಳಿಕೆಯನ್ನು ಅಥವಾ ಮರುಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ಪ್ರ.ವ.ವರದಿ ದಾಖಲಿಸುವ ಪೂರ್ವದಲ್ಲಿಯೇ ಫ್ರಾಸಾ–1 ರವರು ಮಹಜರ್ ಜರುಗಿಸಿ ಲಾರಿಯನ್ನು ಮರಳನ್ನು ನನ್ನ ವಶಕ್ಕೆ ಕೊಟ್ಟಿದ್ದರು. ನಾನು ಯಾವುದೇ ತನಿಖೆ ಕೈಗೊಳ್ಳದಿದ್ದರೂ ಸಹ ಫ್ರಾಸಾ1 ರವರ ಹೇಳಿಕೆಯ ಮೇರೆಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಟ್ಟು ಅವುಗಳಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ